SC/ST No.9-2020

ಪಿಡಬ್ಲ್ಯೂ-1

ದಿಃ 30-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ನಾನು ಈ ಪ್ರಕರಣದ ಆರೋಪಿತನ ವಿರುದ್ಧ ಎರಡು ಪ್ರಕರಣಗಳನ್ನು ದಾಖಲಿಸಿದ್ದು, ಅವುಗಳಲ್ಲಿ ನಾನೇ ದೂರುದಾರನಾಗಿದ್ದು, ಇನ್ನೊಂದು ಪ್ರಕರಣದ ನಂ.ಎಸ್ ಸಿ ಎಸ್ ಟಿ ನಂ.3-2020 ಎಂದರೆ ಸರಿ. ನಿಪಿ.1 ದೂರಿನಲ್ಲಿ ನಾನು ವಿಳಂಬವಾಗಿ ದೂರು ಸಲ್ಲಿಸಿದ ಕುರಿತು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ಮಹಾನಗರ ಪಾಲಿಕೆ ಚುನಾವಣೆ ನಡೆಯುತ್ತಿದ್ದು, ಎಲ್ಲಾ ಪೋಲೀಸ್ ಅಧಿಕಾರಿಗಳು ಸ್ಟ್ರಾಂಗ್ ರೂಮ್ ನಲ್ಲಿ ಇದ್ದ ಕಾರಣ ದೂರು ಸಲ್ಲಿಸಲು ವಿಳಂಬವಾಗಿದೆ ಎಂದು ನುಡಿದಿರುತ್ತಾರೆ. ನಾನು ಮೊದಲು ಕಾಂಗ್ರೇಸ್ ಪಕ್ಷದ ಜಿಲ್ಲಾ ಪಂಚಾಯತ್ ಸದಸ್ಯನಾಗಿ ಅಧ್ಯಕ್ಷನು ಆಗಿದ್ದೆ ಎಂದರೆ ಸರಿ. ಆರೋಪಿತನು ಬಿಜೆಪಿ ಪಕ್ಷದ ಕಾರ್ಯಕರ್ತ ಎಂದರೆ ಸರಿ.

ನಾನು ದೂರು ಸಲ್ಲಿಸಿದ ಮೂರು ದಿನಗಳ ಬಳಿಕ ಸ್ಥಳ ಪಂಚನಾಮೆ ಮಾಡಲಾಗಿದೆ ಎಂದರೆ ಸರಿ. ನನ್ನ ಮನೆಯ ಡೋರ್ ನಂಬರ್ 1099/26 ಆಗಿರುತ್ತದೆ. ನಿ.ಪಿ.5 ತೋರುತ್ತಿರುವ ಸ್ಥಳ ಪಾರ್ಕ್ ಎಂದರೆ ಸರಿಯಲ್ಲ. ನಿ.ಪಿ.5 ಪೋಟೋವನ್ನು ನಮ್ಮ ಮನೆಯ ಎದುರುಗಡೆಯಿಂದ ನಿಂತು ತೆಗೆಯಲಾದ ಪೋಟೋ ಆಗಿರುತ್ತದೆ. ನಿ.ಪಿ.4 ಪಂಚನಾಮೆಗೆ ಸದರಿ ಸ್ಥಳದ ಅಕ್ಕಪಕ್ಕದ ಮನೆಯವರನ್ನು ಕರೆಯಿಸಿ ತನಿಖಾಧಿಕಾರಿಯು ಸಹಿ ಪಡೆದುಕೊಂಡಿರುವುದಿಲ್ಲ. ಆದರೆ ಅವರನ್ನು ವಿಚಾರಿಸಿರುತ್ತಾರೆ.

ನಿ.ಪಿ.6 ಪಂಚನಾಮೆಯನ್ನು ದಿಃ 27-11-2019 ರಂದು ಬರೆಯಲಾಗಿದೆ ಎಂದರೆ ಸರಿ. ನಿ.ಪಿ.6 ರ ಪಂಚನಾಮೆಯಲ್ಲಿ ನನ್ನ ಮತ್ತು ಆರೋಪಿಯ ನಡುವೆ ಆದ ಸಂಭಾಷಣೆ ಆಗಿದೆ ಎನ್ನುವ ವಿವರಣೆಯಲ್ಲಿ ಆರೋಪಿತನು ನನ್ನ ಜಾತಿಯ ಕುರಿತಾಗಿ ಮಾತನಾಡಿದ ವಿಷಯ ಕಂಡುಬರುತ್ತಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಜಾತಿಯ ಕುರಿತಾಗಿ ಮಾತನಾಡಿರುವ ವಿಚಾರ ಇಲ್ಲದೇ ಇದ್ದರೂ ಕೂಡ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.15 ರಲ್ಲಿ ನಾನು ಹೇಳಿದ ಪ್ರಕಾರ ಆರೋಪಿತನು ಜನರನ್ನು ಸೇರಿಸಿ ನನ್ನ ಜಾತಿಯ ಕುರಿತಾಗಿ ಮಾತನಾಡುತ್ತಿದ್ದ ವಿಚಾರ ಕಂಡುಬರುತ್ತಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಕಂಡುಬರುತ್ತಿಲ್ಲ, ಆದರೆ ಆ ಸಮಯದಲ್ಲಿ ಆರೋಪಿತ ಜನರನ್ನು ಸೇರಿಸಿದ್ದ ಎಂದು ನುಡಿದಿರುತ್ತಾರೆ. ಒಂದಾನುವೇಳೆ ಆರೋಪಿತನು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿಯಲ್ಲಿ ಅಪರಾಧ ಮಾಡಿದ್ದರೆ ಅದು ನಾನೇ ಹಾಜರುಪಡಿಸಿದ ಸಿಸಿ ಟಿವಿ ದೃಶ್ಯಾವಳಿಯ ಪೋಟೋಗಳಲ್ಲಿ ಕಾಣಿಸುತ್ತಿತ್ತು ಎಂದರೆ ಸಾಕ್ಷಿಯು ಜನರು ಆ ಸಮಯದಲ್ಲಿ ಅಲ್ಲಿ ಇದ್ದು ಚದುರಿದ್ದ ಕಾರಣ ಪೋಟೋಗಳಲ್ಲಿ ಕಂಡುಬರುತ್ತಿಲ್ಲ ಎಂದು ನುಡಿದಿರುತ್ತಾರೆ. ಸಿಸಿ ಟಿವಿಯಲ್ಲಿ ಸಹಜವಾಗಿ ಜನ ಸೇರಿರುವುದು ಹಾಗೂ ಚದುರಿರುವ ವಿಷಯಗಳು ರೆಕಾರ್ಡ್ ಆಗುತ್ತವೆ ಎಂದರೆ ಸರಿ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಸಿಸಿ ಟಿವಿ ದೃಶ್ಯಗಳು ಹಾಗೂ ಪೆನ್ ಡ್ರೈವ್ ಗಳು ನನಗೆ ಆರೋಪಿತನ ವಿರುದ್ಧ ಇರುವ ರಾಜಕೀಯ ದ್ವೇಷದಿಂದ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಯಾವತ್ತೂ

ಕೂಡ ನನಗೆ ಜಾತಿ ನಿಂದನೆ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನ ವಿರುದ್ಧ ವಿನಾಕಾರಣ ರಾಜಕೀಯ ಪ್ರೇರಿತವಾಗಿ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಲ್ಲಿಸಿದ ಎಲ್ಲಾ ಪಂಚನಾಮೆಗಳಿಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿಯು ಕೆಲವು ಪಂಚನಾಮೆಗಳಿಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದು ನುಡಿದಿರುತ್ತಾರೆ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.